ಮಿತಿಯನ್ನು ಹೆಚ್ಚು ಮಾಡುವ ಅಂದಾಜು ಸರಕಾರಕ್ಕೆ ಇದೆಯೇ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ.—ಸ್ಟ್ಯಾಂಪ್ ಡ್ಯೂಟಿಯ ಮೇಲೆ ರಿಯಾಯಿತಿ ಕೊಡುವುದು ಸರಕಾರದ ಗಮನದಲ್ಲಿ ಇಲ್ಲ. ಆದ್ದರಿಂದ ಅದನ್ನು ಕನ್ಸಿಡರ್ ಮಾಡುವುದಕ್ಕೆ ಸಾಧ್ಯ ಆಗಲಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮತ್ತೆ ಏನನ್ನು ಮಾಡುತ್ತೀರಿ ತಾವು? ರೈತರಿಗೆ ವಿನಾಯಿತಿ ಕೊಡುವ ಪ್ರಶ್ನೆ ಬಂದಾಗ ಇಲ್ಲ ಎನ್ನುತ್ತೀರಿ? ರೈತರಿಗೆ ಸರಿಯಾಗಿ ವಿದ್ಯುತ್ ಶಕ್ತಿ ಕೊಡುವುದಕ್ಕೆ ತಾವುಗಳು ತಯಾರಾಗಿಲ್ಲ. ರೈತರ ಸಾಲ ಮನ್ನಾ ಮಾಡುವುದಕ್ಕೂ ತಮ್ಮ ಸರಕಾರ ತಯಾರಾಗಿಲ್ಲ, ಹೀಗೆ ರೈತರ ಪರವಾಗಿ ನಿಲುವನ್ನು ತಳೆದಿಲ್ಲದ ಸರಕಾರಕ್ಕೆ, ರೈತರ ವಿರೋಧಿ ಸರಕಾರಕ್ಕೆ ಮತ್ತು ರೈತರ ವಿರೋಧಿ ನೀತಿಯನ್ನು ತಳೆದಿರುವ ಈ ಸರ್ಕಾರಕ್ಕೆ ನಾವು ವಿರೋಧ ವ್ಯಕ್ತ ಮಾಡಿ ಪ್ರತಿಭಟನೆಯನ್ನು ಸಲ್ಲಿಸಬೇಕಾಗುತ್ತದೆ. ರೈತರ ಬಗ್ಗೆ ತಾವುಗಳು ಸ್ವಲ್ಪವೂ ಕಾಳಜಿಯನ್ನು ಹೊಂದಿಲ್ಲ. ರೈತರ ಪರವಾಗಿ ಸೌಜನ್ಯಪೂರ್ವಕವಾಗಿ ಉತ್ತರ ಕೊಡುವುದೂ ತಮ್ಮಿಂದ ಆಗುತ್ತಿಲ್ಲ...

(ಗೊಂದಲ)

ಇದು ರೈತರಿಗೆ ದ್ರೋಹವನ್ನು ಮಾಡಿದ ಸರಕಾರ. ಇದು ರೈತರ ವಿರೋಧಿ ಸರಕಾರ ಎಂದು ಕೇಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ಬಿ. ಜೆ. ಪಿ. ಮತ್ತು ರೈತ ಸಂಘದ ಶಾಸಕರು ಘೋಷಣೆಗಳೊಂದಿಗೆ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈಗ ಅಪ್ರೋಪ್ರಿಯೇಶನ್ ಬಿಲ್...

ಶ್ರೀ ಡಿ.ಬಿ. ಚಂದ್ರೇಗೌಡ.—ಹಾಗಿದ್ದಲ್ಲಿ ಈ ಚರ್ಚೆ ಇಲ್ಲಿಗೆ ಮುಗಿಯಿತು ಎಂದು ಅರ್ಥವೇ ?

ಅಧ್ಯಕ್ಷರು.—ಮಾನ್ಯ ಸಚಿವರು ಉತ್ತರವಾಗಿ ಒಂದೂವರೆ ಗಂಟೆ ಮಾತನಾಡಿದ್ದಾರೆ. ಅದಕ್ಕೆ ಕ್ಲಾರಿಫಿಕೇಶನ್ ಒಂದು ಗಂಟೆ ನಡೆಯಿತು.

ಶ್ರೀ ಹೆಚ್. ವಿಶ್ವನಾಥಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವುದು ಸರಕಾರದ ನೀತಿ ಪ್ರಶ್ನೆ ಬಗ್ಗೆ. ಐಎಂಎಲ್ ಮತ್ತು ಸಾರಾಯಿ ಬಗ್ಗೆ ಸರಕಾರದ ನೀತಿ ಏನು ಎಂದು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳುವುದು ಇದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಇಲ್ಲ. I have to move the motion.....

ಶ್ರೀ ಮಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಕೆಲವೊಂದು ವಿಚಾರಗಳನ್ನು ಕರಿತು ನಾವು ಗಂಟೆಗಟ್ಟಲೆ ಕೇಳುತ್ತಾ ಇದ್ದೇವೆ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾ ಇಲ್ಲ. ನಮಗೆ ಕಾವೇರಿ ನೀರನ್ನು ಕೊಡುತ್ತೀರೋ ಇಲ್ಲವೋ ಎಂದು ಹೇಳಿ ಬಿಡಿ.

ಶ್ರೀ ಎಂ. ರಾಜಶೇಖರ ಮೂರ್ತಿ.—ಎಲ್ಲಾ ಮಾನ್ಯ ಸದಸ್ಯರುಗಳು ಹೀಗೆ ಪ್ರಶ್ನೆಗಳನ್ನು ಕೇಳುತ್ತಾ ಇದ್ದಾರೆ ನನಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗಲಾರದು.

ಶ್ರೀ ವಾಟಾಳ್ ನಾಗರಾಜ್.—ತಾವುಗಳು ನಮಗೆ ಕಾವೇರಿ ನದಿ ನೀರು ಕೊಡುವ ವಿಚಾರದಲ್ಲಿ ಮೌನವಾಗಿರುವುದನ್ನು ನೋಡಿದರೆ ನನಗೆ ಭಯವಾಗುತ್ತಾ ಇದೆ. ತಾವು ಆ ವಿಚಾರದಲ್ಲಿ ಏನನ್ನು ಹೇಳಬೇಕೋ ಅದನ್ನು ಈ ಸಭೆಯಲ್ಲಿ ಹೇಳಿ. ಮಾನ್ಯ ಅಧ್ಯಕ್ಷರು ಕೂಡ ಹೇಳಿದ್ದಾರೆ. ಅಲ್ಲಿ ಬಹಳ ಭೀಕರವಾದಂಥ ಪರಿಸ್ಥಿತಿ ಇದೆ. ಇಡೀ ವರ್ಷದಲ್ಲಿ ೧೧ ತಿಂಗಳ ಕಾಲ ಅಲ್ಲಿ ಬರಗಾಲ ಇರುತ್ತದೆ. ಜನರು ತತ್ತರಿಸಿಹೋಗಿದ್ದಾರೆ. ಜನರು ಸಾವಿನ ದವಡೆಯಲ್ಲಿದ್ದಾರೆಂದು ಒಂದೇ ಸಮನೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಆದರೂ ತಾವು ಮೌನವಾಗಿರುವುದನ್ನು ನೋಡಿದರೆ ನಮಗೆ ತುಂಬಾ ನೋವು ಉಂಟಾಗುತ್ತದೆ. ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಾ ಇದ್ದೇನೆ, ತಮ್ಮ ಬಗ್ಗೆ ಇರುವ ಅತ್ಯಂತ ಗೌರವದ ಸಲುವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ದಯವಿಟ್ಟು ಈ ವಿಚಾರದಲ್ಲಿ ತಮ್ಮ ನಿಲುವು ಏನೆಂದು ತಿಳಿಸಬೇಕು.

SRI M. RAJASHEKHARAMURTHY.—We have to move the motion...

ಅಧ್ಯಕ್ಷರು.—ಈಗ ನಿಂತಿರುವವರೆಲ್ಲ ಹಿರಿಯ ಅನುಭವೀ ಸದಸ್ಯರು. ಕ್ಲಾರಿಫಿಕೇಷನ್‌ಗೆ ಒಂದೂವರೆ ಗಂಟೆಯಾಗಿದೆ.